ನಮಗೆ ಈಗಾಗಲೇ ಮಾಹಿತಿಗಳನ್ನು ಕೊಟ್ಟಿರುತ್ತಾರೆ. ಇಂಥಿಂಥ ಗ್ರಾಮಗಳಲ್ಲಿ ಇಷ್ಟಿಷ್ಟು ಸೌಲಭ್ಯದ ಅಗತ್ಯತೆ ಇದೆಯೆಂದು ಹೇಳುತ್ತಾರೆ. ಅದರ ಆಧಾರದಲ್ಲಿ DDW ಕೂಡ ಜಿಲ್ಲಾ ಅನುದಾನಗಳನ್ನು ಹಂಚುವಂಥ ಕೆಲಸಗಳನ್ನು, ಪರಿಕರಗಳನ್ನು ಕೊಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಅಲ್ಲಿರತಕ್ಕಂಥ ಅವರ ಮಾಹಿತಿಗಳನ್ನು ಕೂಡ ಇಟ್ಟುಕೊಂಡು ನಾವು ಕೆಲಸ ಮಾಡುತ್ತಿದ್ದೇವೆ. ಇನ್ನು ಅಧಿಕೃತವಾಗಿ ಸಮೀಕ್ಷೆ ಆಗಬೇಕೆಂದೇನಿದೆಯಲ್ಲ ಅದರ ಬಗ್ಗೆ ನಾವು ಚಿಂತನೆಯನ್ನು ನಡೆಸಿದ್ದೇವೆ. ಜನಗಣತಿಯ ಆಧಾರದಲ್ಲಿ ವಾರ್ಡ್‌ವಾರು ನಮಗೆ ಈ ಒಂದು ವಿಕಲಚೇತನರ ಮಾಹಿತಿಯಿಲ್ಲ. ಆದುದರಿಂದ ಸಮಗ್ರವಾಗಿ ನಾವು ಅದರ ಬಗ್ಗೆ ಸಮೀಕ್ಷೆ ಮಾಡುವುದಕ್ಕೆ ಈಗಾಗಲೇ ಚಿಂತನೆಯನ್ನು ನಡೆಸಿದ್ದೇವೆ.

ಉಪಾಧ್ಯಕ್ಷರು:– ರುದ್ರಪ್ಪ ಮಾನಪ್ಪ ಲಮಾಣಿಯವರೆ, ಮುಂದಿನ ಪ್ರಶ್ನೆ ನಿಮ್ಮದಿದೆ. ನಿಮ್ಮ ಪ್ರಶ್ನೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಬಂದಮೇಲೆ ಉತ್ತರ ಕೊಡಿಸುತ್ತೇನೆ.

ಚನ್ನರಾಯಪಟ್ಟಣದಿಂದ MSIL ಲಿಕ್ಕರ್ ಶಾಪ್

118(1232); ಶ್ರೀ ಬಾಲಕೃಷ್ಣ ಸಿ.ಎನ್.

ಅ) ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಎಂ.ಎಸ್.ಐ.ಎಲ್.ನ ಲಿಕ್ಕರ್ ಶಾಪ್‌ಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಎಂ.ಎಸ್.ಐ.ಎಲ್. ಲಿಕ್ಕರ್ ಶಾಪ್‌ಗಳನ್ನು ತೆರೆಯದೇ ಇರಲು ಕಾರಣವೇನು;

ಇ) ಹೊಸದಾಗಿ ಎಂ.ಎಸ್.ಐ.ಎಲ್. ಲಿಕ್ಕರ್ ಶಾಪ್‌ಗಳನ್ನು ತೆರೆಯಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು?

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ (ಮಾನ್ಯ ಅಬಕಾರಿ ಸಚಿವರು)

ಅ) ಚನ್ನರಾಯಪಟ್ಟಣ ತಾಲ್ಲೂಕಿಗೆ 03 ಎಂಎಸ್ಐಎಲ್ ಲಿಕ್ಕರ್ ಶಾಪ್‌ಗಳನ್ನು ಮಂಜೂರು ಮಾಡಲಾಗಿರುತ್ತದೆ. ವಿವರ ಕೆಳಕಂಡಂತಿರುತ್ತದೆ.

1. ಖಾ.ನಂ.1148, ಹಿರಿಸಾವೆ ಗ್ರಾಮ, ಚನ್ನರಾಯಪಟ್ಟಣ ತಾ, ಹಾಸನ ಜಿಲ್ಲೆ
2. ಖಾ.ನಂ.278, ಕಾರೆಹಳ್ಳಿ ಗ್ರಾಮ, ಚನ್ನರಾಯಪಟ್ಟಣ ತಾ, ಹಾಸನ ಜಿಲ್ಲೆ
3. ಖಾ.ನಂ.208, ದಿಡಿಗ ಗ್ರಾಮ, ಚನ್ನರಾಯಪಟ್ಟಣ ತಾ, ಹಾಸನ ಜಿಲ್ಲೆ

ಆ) ಉದ್ಭವಿಸುವುದಿಲ್ಲ

ಇ) ಪ್ರತಿ ತಾಲ್ಲೂಕಿಗೆ 02 ರಂತೆ (ನಗರ ಪ್ರದೇಶಕ್ಕೆ ಒಂದು ಮತ್ತು ಗ್ರಾಮೀಣ ಪ್ರದೇಶಕ್ಕೆ ಒಂದರಂತೆ) ಎಂಎಸ್ಐಎಲ್ ವತಿಯಿಂದ ಸಿಎಲ್–11ಸಿ ಸನ್ನದನ್ನು ಪ್ರಾರಂಭಿಸಲು ಕರ್ನಾಟಕ ಅಬಕಾರಿ (ದೇಶಿಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು 1968 ರ ನಿಯಮ 3(11ಸಿ) ಮತ್ತು ನಿಯಮ 8 ರಂತೆ ಹಾಗೂ ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು 1967 ರ ನಿಯಮ 5 ರನ್ವಯ ಇರುವ ನಿಬಂಧನೆಗಳನ್ನು ಪಾಲಿಸಿ ಸನ್ನದು ಮಂಜೂರು ಮಾಡಲು ಪೂರ್ವಾನುಮತಿ ನೀಡಲಾಗುತ್ತಿದೆ.

ಶ್ರೀ ಸಿ.ಎನ್. ಬಾಲಕೃಷ್ಣ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. 'ಅ' ನಲ್ಲಿ ಕೇಳಿರುವಂತಹ ಪ್ರಶ್ನೆಗೆ ಚನ್ನರಾಯಪಟ್ಟಣ ತಾಲ್ಲೂಕಿಗೆ 03 ಎಂಎಸ್ಐಎಲ್ ಲಿಕ್ಕರ್ ಶಾಪ್‌ಗಳನ್ನು ನೀಡಲಾಗಿದೆ ಎಂದು ಹೇಳಿದ್ದಾರೆ. 'ಆ' ನಲ್ಲಿ ಕೇಳಿರುವಂತಹ ಪ್ರಶ್ನೆಗೆ ಅವರ ಉತ್ತರದಲ್ಲಿ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಇನ್ನು 'ಇ' ನಲ್ಲಿ ಕೇಳಿರುವಂತಹ ಪ್ರಶ್ನೆಗೆ ಪ್ರತಿ ತಾಲ್ಲೂಕಿಗೆ 2 ರಂತೆ ಮಾತ್ರ ಕೊಡುವುದಕ್ಕೆ ಸಾಧ್ಯವಿದೆ ಎಂದು ತಿಳಿಸಿದ್ದಾರೆ. ನಮ್ಮ ಚನ್ನರಾಯಪಟ್ಟಣ ನಗರದಲ್ಲಿ ಖಾಸಗಿ ಸನ್ನದ್ದುದಾರರು ನಿಗದಿತ ದರಕ್ಕಿಂತ ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದಿರುವುದರಿಂದ ಈ ಪ್ರಶ್ನೆಯನ್ನು ಮಾನ್ಯ ಅಬಕಾರಿ ಸಚಿವರಿಗೆ ಕೇಳಿದ್ದೇನೆ. ಈ ಹಿಂದೆ ಕೂಡ ನಮ್ಮ ಜೊತೆ ಪತ್ರ ವ್ಯವಹಾರ ಮಾಡಿ ಚನ್ನರಾಯಪಟ್ಟಣಕ್ಕೆ ಸೂಕ್ತ ದರದಲ್ಲಿ ಮಾರಾಟ ಮಾಡುವುದಕ್ಕೆ ಎಂಎಸ್ಐಎಲ್ ಶಾಪ್ ನೀಡಬೇಕೆಂದು ಮನವಿ ಮಾಡಿದ್ದೆನು. ಅದಕ್ಕೆ ದಯಮಾಡಿ ಅವಕಾಶ ಮಾಡಿ ಕೊಡಬೇಕೆಂದು ಈ ಮೂಲಕ ತಮಗೆ ಮನವಿ ಮಾಡುತ್ತೇನೆ.

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ:– ಮಾನ್ಯ ಉಪಾಧ್ಯಕ್ಷರೆ, ನಾವು ಎಂಎಸ್ಐಎಲ್‌ಗೆ ಡೈರೆಕ್ಷನ್ ಕೊಟ್ಟು ಅಲ್ಲಿ ಒಂದು ಶಾಪ್ ತೆರೆಯುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ನಾನು ಒಂದು ಉಪ ಪ್ರಶ್ನೆಯನ್ನು ಕೇಳುತ್ತೇನೆ. ಎಂಎಸ್ಐಎಲ್ ಶಾಪ್ ಏನು ಕೊಡುತ್ತೀರಿ, ಅದನ್ನು ಸೆನ್ಸ್‌ಸ್ ಮೇಲೆ ಕೊಡುತ್ತೀರಾ ಅಥವಾ ಅದಕ್ಕೆ ಟಾರ್ಗೆಟ್ ಇದೆಯೇ?

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹಳ್ಳಿ:– ಹಿಂದೆ ಆರ್ಥಿಕ ಇಲಾಖೆಯವರು ರಾಜ್ಯದಲ್ಲಿ ಸುಮಾರು 400 ಶಾಪ್‌ಗಳನ್ನು ಕೊಡುವುದಕ್ಕೆ ನಮಗೆ ಮಂಜೂರಾತಿ ನೀಡಿದರು, ಆ ಆಧಾರದ ಮೇಲೆ ನಾವು ಕೊಡುತ್ತಿದೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್:– ಇದಕ್ಕೆ ಒಂದು ಸೆನ್ಸ್‌ಸ್ ಆದರೂ ಬೇಕು ಅಥವಾ ಟಾರ್ಗೆಟ್ ಆದರೂ ಬೇಕು. ನೀವು ಯಾವ ಮಾನದಂಡ ಇಟ್ಟುಕೊಂಡು ಕೊಡುತ್ತಿದ್ದೀರಿ?

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ:– ಒಂದು ತಾಲ್ಲೂಕಿಗೆ ಮೂರು ಶಾಪ್‌ಗಳಂತೆ ನಾವು ಕೊಡುತ್ತಿದ್ದೇವೆ.

ಶ್ರೀ ಜಿ.ಹೆಚ್. ಶ್ರೀನಿವಾಸ್:– ಮಾನ್ಯ ಉಪಾಧ್ಯಕ್ಷರೆ, ಕೆಲವೊಂದು ಊರುಗಳಲ್ಲಿ ಎಲ್ಲಿ ವೈನ್ ಶಾಪ್‌ಗಳಿವೆ ಅಲ್ಲಿ ಎಂಎಸ್‌ಐಎಲ್ ಲಿಕ್ಕರ್ ಶಾಪ್‌ಗಳನ್ನು ಕೊಡಬಾರದು ಎಂದು ಅಧಿಕಾರಿಗಳಿಗೆ ಆದೇಶ ಮಾಡಿದ್ದೀರಾ ಅಥವಾ ಹೆಚ್ಚಿನ ಅನುಕೂಲವಾಗುವುದಿದ್ದರೆ ಎಂಎಸ್‌ಐಎಲ್‌ಗೆ ಕೊಡಬಹುದು ಎಂದು ಇದೆಯೇ?

ಶ್ರೀ ವೈ.ಎನ್. ರುದ್ರೇಶ್ ಗೌಡ:– ಕೆಲವು ಹೋಬಳಿಗಳಲ್ಲಿ ಎಷ್ಟೆಷ್ಟು ಕೊಟ್ಟಿದ್ದೀರಿ? ನನಗೆ ಅನಿಸುತ್ತದೆ ಒಂದೊಂದು ಹೋಬಳಿಗೆ ಒಂದೊಂದು, ಎರಡೆರಡು ಶಾಪ್‌ಗಳನ್ನು ಕೊಟ್ಟಿದ್ದೀರಿ.

ಶ್ರೀ ಶಿವಾನಂದ ಎಸ್. ಪಾಟೀಲ್:– ಒಂದೊಂದು ತಾಲ್ಲೂಕಿಗೆ excess ಕೊಟ್ಟಿದ್ದಾರೆ. ಒಂದು ತಾಲ್ಲೂಕಿನಲ್ಲಿ ಆರು–ಆರು ಇವೆ.

ಶ್ರೀ ಜಿ.ಹೆಚ್. ಶ್ರೀನಿವಾಸ್:– ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ. ನೀವು ಆಮೇಲೆ ಮಾತನಾಡುವಿರಂತೆ.

ಶ್ರೀ ಸಿ.ಎನ್. ಬಾಲಕೃಷ್ಣ:– ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ ಇದರ ಹಿಂದೆ ಖಾಸಗಿ ಸನ್ನದ್ದುದಾರರ ಲಾಬಿ ಇದೆ. ಬೇಕಾಗಿರುವಂತಹ ಕಡೆ ಶಾಪ್ ತೆರೆಯುವುದಕ್ಕೆ ಅವಕಾಶ ಕೊಡುತ್ತಿಲ್ಲ. ಎಂಎಸ್ಐಎಲ್‌ಗೆ ಬೇರೆ ರೀತಿ ಒತ್ತಡ ಹಾಕುತ್ತಿದ್ದಾರೆ. ಅದರಿಂದ ಚನ್ನರಾಯಪಟ್ಟಣ ಪ್ರದೇಶದಲ್ಲಿ 40 ಸಾವಿರ ಜನಸಂಖ್ಯೆ ಇದೆ. ಸರ್ಕಾರ ಕೂಡ ಎಕ್ಸೈಜ್ ರೆವಿನ್ಯೂನಿಂದ ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವಂತಹ ಸ್ಥಿತಿ ನಿರ್ಮಾಣವಾಗಿರುವಂತಹ ಸಂದರ್ಭದಲ್ಲಿ ಆ ನಗರಕ್ಕೆ ಬೇಡಿಕೆ ಇರುವಂತೆ ಶಾಪ್ ತೆರೆಯಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ಈ ಎಂಎಸ್ಐಎಲ್ ಶಾಪ್ ಕೀಪರ್ಸ್ ಏನು ಮಾಡುತ್ತಾರೆಂದರೆ ಬೇರೆ ವೆಹಿಕಲ್‌ನಲ್ಲಿ ಇಟ್ಟುಕೊಂಡು ಊರು ಊರಿಗೆ ತೆಗೆದುಕೊಂಡು ಹೋಗಿ ಮಾರುತ್ತಿದ್ದಾರೆ. ಒಂದೊಂದು ತಾಲ್ಲೂಕಿನಲ್ಲಿ ಇವರು ಏನು ಮಾನದಂಡ ಇಟ್ಟುಕೊಂಡಿದ್ದಾರೆಂದು ಗೊತ್ತಿಲ್ಲ. ಒಂದೊಂದು ಕಡೆ ಆರು ಶಾಪ್‌ಗಳಿವೆ. ಅದು ಬಹುತೇಕ ತಪ್ಪು ಮಾಹಿತಿ ಇದೆ. ಇದಕ್ಕೆ ಏನಾದರೂ ಒಂದು yard-stick ಇಟ್ಟುಕೊಳ್ಳಿ. ಅದರ ಬಗ್ಗೆ census ಮಾಡಿ, ತಾಲ್ಲೂಕು ಆದರೂ ಇಡಿ ಅಥವಾ ಏರಿಯಾ ಆದರೂ ಇಡಿ. Geographical areaಗೆ ಇಷ್ಟು ಶಾಪ್ಸ್ ಎಂದು ಮಾಡಿ. ಎಷ್ಟು ಜನ ಕುಡುಕರಿದ್ದಾರೆ ಎಂದು ನೋಡಿ ಇಷ್ಟು ಶಾಪ್ಸ್ ಎಂದು ಒಂದು ಮಾನದಂಡ ಇಟ್ಟುಕೊಳ್ಳಿ

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಾಲಕೃಷ್ಣರವರು ಬಹಳ ಗಹನವಾದಂತಹ ವಿಚಾರವನ್ನು ಎತ್ತಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕಾಗುತ್ತದೆ. ಎಲ್ಲೆಲ್ಲಿ ಎಂಎಸ್ಐಎಲ್ ಶಾಪ್‌ಗಳನ್ನು ತೆರೆಯಬೇಕಾಗಿದೆ ಅಲ್ಲಿ ಪ್ರೈವೇಟ್ ಲೈಸೆನ್ಸ್ ಹೋಲ್ಡರ್ಸ್ ಯಾರಿದ್ದಾರೆ, ಆ ಲಾಬಿಯವರು ಸರ್ಕಾರದ ಮೇಲೆ ಎಂದರೆ ಆಡಳಿತ ಯಂತ್ರದ ಮೇಲೆ ವರ್ಚಸ್ಸು ಬೀರಿ ತಮ್ಮ ಎಲ್ಲಾ ಶಕ್ತಿಯನ್ನು ಪ್ರದರ್ಶನ

ಮಾಡಿ, ಸರ್ಕಾರಿ ಶಾಪ್‌ಗಳನ್ನು ತೆರೆಯದಂತೆ ಮಾಡುತ್ತಿದ್ದಾರೆ. ಇದು ನಮ್ಮ ಅನುಭವ ಕೂಡ ಆಗಿದೆ. ಅದಕ್ಕೆ ಮಾನ್ಯ ಮಂತ್ರಿಗಳು ಸ್ಪಷ್ಟವಾದ ಉತ್ತರವನ್ನು ನೀಡಬೇಕು.

ಶ್ರೀ ಬಿ.ಆರ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, ನಾನೂ ಕೂಡ ಇದಕ್ಕೆ ಧ್ವನಿಗೂಡಿಸುತ್ತೇನೆ. ಈಗ ಬೇರೆ ಬೇರೆ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಒಂದೊಂದು ಕಡೆ ಆರು ಆರು ಶಾಪ್‌ಗಳು ಇವೆ. ಇಡೀ ನನ್ನ ಕ್ಷೇತ್ರದಲ್ಲಿ ಒಂದೇ ಒಂದು ಎಂಎಸ್‌ಐಎಲ್ ಶಾಪ್ ಇದೆ. ಇವರು ಲಾಬಿಗೆ ಮಣಿದು ಅಲ್ಲಿ ತರಲಿಲ್ಲ. ಈ ರೀತಿ ಲಾಬಿಗೆ ಮಣಿದರೆ ಸರ್ಕಾರಿ ಶಾಪ್‌ಗಳನ್ನು ಹೆಚ್ಚಿಗೆ ಮಾಡುತ್ತೀರೋ ಅಥವಾ ಖಾಸಗಿಯವರಿಗೆ ಬೆಂಬಲ ಕೊಡುತ್ತೀರೋ?

ಶ್ರೀ ಶಿವಾನಂದ ಎಸ್. ಪಾಟೀಲ್:– ಒಂದೇ ಅಂಗಡಿಯವನು ನಾಲ್ಕಾಲ್ಕು ಟಂಟಂ ಇಟ್ಟು ಮಾರುತ್ತಾನೆ. ಇದು ಯಾವ ನೀತಿ? ಇದಕ್ಕೆ ಏನಾದರೂ ಒಂದು ಮಾನದಂಡ ಫಿಕ್ಸ್ ಮಾಡಿ.

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ:– ಮಾನ್ಯ ಉಪಾಧ್ಯಕ್ಷರೆ, ಅದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ ಒಂದು ನೀತಿಯನ್ನು ರೂಪಿಸುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್:– ಇದನ್ನು ಅರ್ಧ ಗಂಟೆ ಚರ್ಚೆಗೆ ಹಾಕಿ.

ಉಪಾಧ್ಯಕ್ಷರು:– ಆಯಿತು, ಇದನ್ನು ಅರ್ಧ ಗಂಟೆಗೆ ಚರ್ಚೆಗೆ ಹಾಕುತ್ತೇನೆ.

ಶ್ರೀ ಜಿ.ಹೆಚ್. ಶ್ರೀನಿವಾಸ್:– ಮಾನ್ಯ ಉಪಾಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬಂದುಬಿಡಲಿ. ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ಎಲ್ಲೆಲ್ಲಿ ಎಂಎಸ್‌ಐಎಲ್ ಶಾಪ್‌ಗಳು ಇವೆ, ಅಲ್ಲಿ . .

ಉಪಾಧ್ಯಕ್ಷರು:– ಇದರ ಬಗ್ಗೆ ಅರ್ಧ ಗಂಟೆಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆ, ಆಗ ಮಾತನಾಡಿ. ಮುಂದಿನ ಪ್ರಶ್ನೆ ಶ್ರೀ ಮುನಿರತ್ನರವರು ಕೇಳಿ, ಇಲ್ಲ ಶ್ರೀ ಶ್ರೀನಿವಾಸ್ ಎಸ್.ಆರ್. ರವರು ಇಲ್ಲ, ಶ್ರೀ ಭೂಸನೂರ ರಮೇಶ್ ಬಾಳಪ್ಪನವರು ಕೇಳಿ. ಪ್ರಾಥಮಿಕ ಶಿಕ್ಷಣ ಸಚಿವರಿಗೆ ಸಂಬಂಧಪಟ್ಟಂತಹ ಪ್ರಶ್ನೆಗಳು ನಾಲ್ಕೈದು ಇವೆ. ಅವರು ಬಂದಿಲ್ಲ. ವಾಸು, ಶ್ರೀನಿವಾಸ್ ಎಸ್.ಆರ್. ಎನ್ನುವುದು ನಿಮ್ಮ ಪ್ರಶ್ನೆಯೇ?

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಉಪಾಧ್ಯಕ್ಷರೆ, ಪ್ರಾಥಮಿಕ ಶಿಕ್ಷಣ ಸಚಿವರಿಗೆ ಸಂಬಂಧಪಟ್ಟ ಪ್ರಶ್ನೆಗಳಿಗೆ ನಾನು ಉತ್ತರ ಕೊಡುತ್ತೇನೆ.

ಉಪಾಧ್ಯಕ್ಷರು:– ಟಿ.ಬಿ. ಜಯಚಂದ್ರರವರೇ ಪ್ರಾಥಮಿಕ ಶಿಕ್ಷಣ ಸಚಿವರಿಗೆ ಸಂಬಂಧಪಟ್ಟಂತಹ ಪ್ರಶ್ನೆಗಳು ಮೂರ್ನಾಲ್ಕು ಇದೆ. ಅದಕ್ಕೆ ತಾವು ಒಂದು ಕಡೆಯಿಂದ ಉತ್ತರ ಕೊಡುತ್ತೀರೋ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ:– ಆಯಿತು, ಕೊಡುತ್ತೇನೆ. ಒಂದು ಕಡೆಯಿಂದ ಪ್ರಶ್ನೆಯನ್ನು ಕರೆಯಿರಿ.

ಉಪಾಧ್ಯಕ್ಷರು:– ವಿನಯ್ ಕುಲಕರ್ಣಿಯವರೆ, ತಾವು ಕೇಳಿ.

ಶಿಕ್ಷಕರ ಕೊರತೆ

110(1281); ಶ್ರೀ ವಿನಯ್ ಕುಲಕರ್ಣಿ (ಧಾರವಾಡ)

ಅ) ಧಾರವಾಡ ವಿಧಾನ ಸಭಾ ಕ್ಷೇತ್ರದ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕೊರತೆ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಆ) ಧಾರವಾಡ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ